ಆ) ಇಲ್ಲ.

ಉದ್ಭವಿಸುವುದಿಲ್ಲ.

ಇ) ಇಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಅಚೆಂಡಾ ಟಾಸ್ಕ್ ಫೋರ್ಸ್ ಸಹಯೋಗದೊಂದಿಗೆ ತನ್ನಲ್ಲಿರುವ ಸಂಪನ್ಮೂಲ ಬಳಸಿಕೊಂಡು ಲಾಲ್‌ಬಾಗ್ ಉದ್ಯಾನವನ್ನು ಭೌತಿಕವಾಗಿ ಹಾಗೂ ಸ್ಥಾನಿಕವಾಗಿ ಅಭಿವೃದ್ಧಿಪಡಿಸಲು ಆದೇಶಿಸಿದೆ.

ಈ) 1) ಲಾಲ್‌ಬಾಗ್ ಉದ್ಯಾನವನದ ಸುತ್ತಲೂ ಇರುವ ಕಾಂಪೌಂಡ್ ಅನ್ನು ಬಲಪಡಿಸುವುದು.

2) ಲಾಲ್‌ಬಾಗ್ ಕೆರೆಯನ್ನು ಹೂಳು ತೆಗೆದು ಅಭಿವೃದ್ಧಿ ಪಡಿಸುವುದು.

3) ಹುಲ್ಲುಹಾಸುಗಳ ನವೀಕರಣ.

4) ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಪದ್ಧತಿ ಅಳವಡಿಕೆ.

5) ಮರದ ಬೆಂಚುಗಳ ದುರಸ್ತಿ.

6) 4 ಶೌಚಾಲಯಗಳ ನಿರ್ಮಾಣ

7) ಕಾಲುದಾರಿಗಳ ದುರಸ್ತಿ ಹಾಗೂ ರಸ್ತೆಗೆ ಟಾರು ಹಾಕುವುದು.

8) ವಿದ್ಯುತ್ ದೀಪಗಳ ದುರಸ್ತಿ ಹಾಗೂ ನವೀಕರಣ.

9) ಕುಡಿಯುವ ನೀರಿನ ಸೌಲಭ್ಯವನ್ನು ಹೆಚ್ಚಿಸುವುದು.

10) ಕಾರಂಜಿಗಳ ನವೀಕರಣ.

11) ಹಸಿರು ಮನೆ ನಿರ್ಮಿಸಿ ಸಸ್ಯಾಭಿವೃದ್ಧಿ ಹೆಚ್ಚಿಸುವುದು.

12) ರಾಕ್ ಗಾರ್ಡನ್ ಹಾಗೂ ಜಪಾನೀಸ್ ಗಾರ್ಡನ್ ಅನ್ನು ನವೀಕರಿಸುವುದು.

13) ಕ್ಯಾಕ್ಟೆ ಪಾರ್ಕ್ ಅಭಿವೃದ್ಧಿಗೊಳಿಸುವುದು.

14) ಮುಖ್ಯ ದ್ವಾರದ ಆವರಣದಲ್ಲಿ ಭೂದೃಶ್ಯ ಹಾಗೂ ಗಾರ್ಡನ್ ಅಭಿವೃದ್ಧಿ ಪಡಿಸುವುದು.

15) ಹೊಸ ಜಾತಿಯ ಗಿಡಗಳ ಪರಿಚಯ.

16) ತಾವರೆಕೊಳದ ಸುತ್ತಲೂ ಗಾರ್ಡನ್ ಅಭಿವೃದ್ಧಿ ಪಡಿಸುವುದು ಹಾಗೂ ಅಲಂಕಾರಿಕ ಗಿಡಗಳನ್ನು ನೆಟ್ಟು ಸುಂದರಗೊಳಿಸುವುದು.

17) ತೋಟಗಾರಿಕೆ ಮಾಹಿತಿ ಕೇಂದ್ರದ ಕಛೇರಿ ಹಿಂಭಾಗದಲ್ಲಿ ಪನಲ್ ಗಾರ್ಡನ್ ಹಾಗೂ ನೀರಿನ ಜಲಪಾತ ನಿರ್ಮಿಸುವುದು.

18) ಆರ್ಕಿಡ್ ಹೌಸ್ ಸ್ಥಾಪಿಸುವುದು. ಈ ಯೋಜನೆಗಳಿಗೆ ತಗಲುವ ಅಂದಾಜು ವೆಚ್ಚ ರೂ. 7.05 ಕೋಟಿ.

ಉ) ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಗಳಿಗೆ ಪರವಾನಗಿ

3254(3708) ಶ್ರೀ ಸೋಮಣ್ಣ. ವಿ. (ಬಿನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಪಡಿತರ ಅಂಗಡಿಗಳೆಷ್ಟು;

ಆ) ರಾಜ್ಯದಲ್ಲಿರುವ ಎಲ್ಲಾ ವಿಧದ ಪಡಿತರ ಚೀಟಿದಾರರ ಸಂಖ್ಯೆ ಎಷ್ಟು;

ಇ) 2002–03ರಲ್ಲಿ ಹೊಸದಾಗಿ ಎಷ್ಟು ನ್ಯಾಯಬೆಲೆ ಅಂಗಡಿಗಳಿಗೆ ಪರವಾನಗಿ ನೀಡಲಾಯಿತು: (ಜಿಲ್ಲಾವಾರು ಮಾಹಿತಿ ನೀಡುವುದು);

ಈ) 2003–04 ರಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ಮಾತ್ರ ನ್ಯಾಯಬೆಲೆ ಅಂಗಡಿಗಳನ್ನು ನೀಡಲಾಗುವುದೇ;

ಉ) ಹಾಗಿದ್ದಲ್ಲಿ 2003–04ರಲ್ಲಿ ಇಲ್ಲಿಯವರೆಗೆ ಎಷ್ಟು ಸ್ತ್ರೀಶಕ್ತಿ ಗುಂಪುಗಳಿಗೆ ನ್ಯಾಯಬೆಲೆ ಅಂಗಡಿಗಳನ್ನು ನೀಡಲಾಗಿದೆ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ದಿನಾಂಕ : 31.5.2003ರ ಅಂತ್ಯಕ್ಕೆ ರಾಜ್ಯಾದ್ಯಂತ ಒಟ್ಟು 20376 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ.

ಆ) ದಿನಾಂಕ: 31.5.2003ರ ಅಂತ್ಯಕ್ಕೆ ರಾಜ್ಯಾದ್ಯಂತ ಒಟ್ಟು 1,11,84,211 ಪಡಿತರ ಚೀಟಿದಾರರು ಇರುತ್ತಾರೆ.

ಇ) 2002–03ನೇ ಸಾಲಿನಲ್ಲಿ ಹೊಸದಾಗಿ ಮಂಜೂರು ಮಾಡಲಾದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ: 171 ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ:

ಕ್ರ. ಸಂ.	ಜಿಲ್ಲೆಯ ಹೆಸರು	2002–03ನೇ ಸಾಲಿನಲ್ಲಿ ಮಂಜೂರು ಮಾಡಲಾದ ನ್ಯಾ.ಬೆ.ಅಂ. ಸಂಖ್ಯೆ
1.	ಬೆಂಗಳೂರು (ಅ.ಪ)	0
2.	ಬೆಂಗಳೂರು (ನಗರ)	3
3.	ಬೆಂಗಳೂರು (ಗ್ರಾಮಾಂತರ)	0
4.	ಬಾಗಲಕೋಟೆ	10
5.	ಬೆಳಗಾಂ	12
6.	ಬಳ್ಳಾರಿ	4
7.	ಬೀದರ್	4
8.	ಬಿಜಾಪುರ	0
9.	ಚಾಮರಾಜನಗರ	6
10.	ಚಿಕ್ಕಮಗಳೂರು	2
11.	ಚಿತ್ರದುರ್ಗ	5
12.	ದಾವಣಗೆರೆ	2
13.	ದಕ್ಷಿಣ ಕನ್ನಡ	3
14.	ಧಾರವಾಡ	5
15.	ಗದಗ್	1
16.	ಗುಲ್ಬರ್ಗ	13